11

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 16/3/2021

# ಶೇ. 10 ಮೀಸಲಾತಿ ಶೀಘ್ರವೇ ಆದೇಶ

ಉವಾ 16/3/21

**ವಿಧಾನಸಭೆ:** ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ.10ರಷ್ಟು ಮೀಸಲಾತಿಯನ್ನು ರಾಜ್ಯದಲ್ಲೂ ಕಲ್ಪಿಸುವ ಸಂಬಂಧ ಯಾವುದೇ ಗೊಂದಲವಿಲ್ಲದಂತೆ ಶೀಘ್ರ ಆದೇಶ ಹೊರಡಿಸಲಾಗುವುದು ಎಂದು ಸಚಿವ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.



ಬಿಜೆಪಿಯ ಡಿ. ವೇದ ವ್ಯಾಸ ಕಾಮತ್ ಪ್ರಸ್ತಾಪ ಸಂಬಂಧ ಮಾತನಾಡಿದ ಸಚಿವರು, ಕೇಂದ್ರ ಸರ್ಕಾರವು ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ವರ್ಗಗಳ ಜಾತಿ ಹೊರತುಪಡಿಸಿ; ಆರ್ಥಿಕವಾಗಿಹಿಂದುಳಿದ ಉಳಿದ ಮೇಲ್ವರ್ಗದವರಿಗೆ ಶೇ. 10ರಷ್ಟು ಮೀಸಲಾತಿ ಕಲ್ಪಿಸಿದೆ. ಆದರಂತೆ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳ ಜಾತಿ, ಉಪಜಾತಿಗಳ ಪಟ್ಟಿ ಜತೆಗೆ ಉಳಿದ ಜಾತಿಗಳ ಪಟ್ಟಿ ಸಿದ್ಧಪಡಿಸಿ ಆದೇಶ ಹೊರಡಿಸಲಾಗಿದೆ. ಆದರೆ ಕೆಲ ಸಮುದಾಯಗಳ ಹೆಸರು ಬಿಟ್ಟು ಹೋಗಿದ್ದರಿಂದ ಸರ್ಕಾರದ ಮಟ್ಟದಲ್ಲೇ ಚರ್ಚಿಸಲಾಗಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ವೇದವ್ಯಾಸ ಕಾಮತ್, ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದವರಿಗೆ ಶೇ. 10ರಷ್ಟು ಮೀಸಲಾತಿ ಕಲ್ಪಿಸಿದ್ದು ಅದರಂತೆ ರಾಜ್ಯದಲ್ಲಿ ಪ್ರಮಾಣ ಪತ್ರ ವಿತರಣೆಯಲ್ಲಿನ ತಾಂತ್ರಿಕ ದೋಷದಿಂದ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ಸಿಗದಂತಾಗಿದೆ. ಕಂದಾಯ ಇಲಾಖೆ ತಂತ್ರಾಂಶದಲ್ಲಿ ಜಾತಿ ವಿವರದಲ್ಲಿ 'ಸಾಮಾನ್ಯ ವರ್ಗ' ಎಂದು ನಮೂದಿಸಿರುವುದರಿಂದ ಹಲವು ಜಾತಿಗಳು ಸೌಲಭ್ಯದಿಂದ ವಂಚಿತವಾಗಿವೆ ಎಂದು ಹೇಳಿದರು.

ಪರಿಶಿಷ್ಟ ಜಾತಿ/ ಪಂಗಡ, ಹಿಂದುಳಿದ ವರ್ಗ ಹಾಗೂ ಇನ್ನಿತರ ಯಾವುದೇ ರೀತಿಯ ಮೀಸಲಾತಿ ಪಡೆಯದವರಿಗೆ ಈ ಸೌಲಭ್ಯ ನೀಡುವಂತೆ ಕೇಂದ್ರ ಸರ್ಕಾರ ಸೂಚಿಸಿದೆ. ಇದನ್ನು ಸರಿಯಾಗಿ ಪರಿಶೀಲಿಸದ ಕಾರಣ ಗೌಡ ಸಾರಸ್ವತ ಬ್ರಾಹ್ಮಣ, ಸಾರಸ್ವತ ಬ್ರಾಹ್ಮಣ ಸೇರಿ ಹಲವು ಜಾತಿಗಳು ಸೌಲಭ್ಯದಿಂದ ವಂಚಿತವಾಗಿದೆ. ಸರ್ಕಾರ ಕೂಡಲೇ ತಾಂತ್ರಿಕ ನ್ಯೂನತೆ ಸರಿಪಡಿಸಲು ಕ್ರಮ ಕೈಗೊಳ್ಳಬೇಕು. ಹಾಗೆಯೇ ಗೋವಾ ಸರ್ಕಾರ ಮಾದರಿಯಲ್ಲೇ ಮೀಸಲಾತಿ ಹೊಂದದವರಿಗೆ ಅವಕಾಶ ಕಲ್ಪಿಸಬೇಕು ಎಂದು ಅವರು ಎಂದು ಗಮನ ಸೆಳೆದರು.

▶ 7ನೇ ಪುಟಕ್ಕೆ

# ಶೇ.10 ಮೀಸಲಾತಿ ಶೀಘ್ರವೇ ಆದೇಶ

16/3/21

**1ನೇ ಪುಟದಿಂದ** ▶ ಕಂದಾಯ ಇಲಾಖೆ ತಂತ್ರಾಂಶದಲ್ಲಿ ಕೇವಲ ಬ್ರಾಹ್ಮಣ ಜಾತಿ ಎಂದು ನಮೂದಾಗಿದ್ದು ಉಪಜಾತಿಗಳು ನಮೂದಾಗಿಲ್ಲ. ಹಾಗಾಗಿ ಪೂರ್ಣ ಮಾಹಿತಿ ಸಂಗ್ರಹಿಸಿ ದಾಖಲಿಸಿ ಮುಂದಿನ ಶೈಕ್ಷಣಿಕ ವರ್ಷದಿಂದಲೇ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.

ಇದಕ್ಕೆ ದನಿಗೂಡಿಸಿದ ಸರ್ಕಾರದ ಮುಖ್ಯ ಸಚೇತಕ ವಿ.ಸುನೀಲ್ ಕುಮಾರ್, ಕಾನೂನು ತೊಡಕುಗಳ ಕಾರಣಕ್ಕೆ ನಿರಂತರವಾಗಿ ವಿಳಂಬವಾಗುತ್ತಾ ಹೋದರೆ ಸಾಕಷ್ಟು ಮಂದಿ ಪ್ರಮಾಣ ಪತ್ರ ಸಿಗದೆ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ. ಅರ್ಹರಿಗೆ ಕಾಲೇಜು, ಹಾಸ್ಟೆಲ್‌ಗಳಲ್ಲಿ ಸೀಟು ಸಿಗದಂತಾಗುತ್ತಿದೆ. 'ಜಿಎಸ್‌ಬಿ'ಯಲ್ಲಿರುವ ಅತಿ ಬಡವರಿಗೂ ಕೇಂದ್ರದ ಆದೇಶದನ್ವಯ ಮೀಸಲಾತಿ ಸಿಗಬೇಕು. ನಮ್ಮ ಸರ್ಕಾರ ತಾಂತ್ರಿಕ ದೋಷದ ನೆಪವೊಡ್ಡಿ ಮುಂದೂಡುತ್ತಾ ಹೋದರೆ ಯುವಜತೆಗೆ ನಷ್ಟವಾಗಲಿದೆ. ಗೋವಾ ಸರ್ಕಾರದ ಮಾದರಿಯಲ್ಲೇ ಸರ್ಕಾರ ತಕ್ಷಣ ಆದೇಶ ಹೊರಡಿಸಿದರೆ ಆ ಸಮುದಾಯದವರಿಗೆ ನ್ಯಾಯ ಸಿಕ್ಕಂತಾಗಲಿದೆ ಎಂದು ಹೇಳಿದರು.

**ಕಾಗೇರಿ ಸಲಹೆ:** ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ದೇಶದ 8- 10ರಾಜ್ಯಗಳು ಈಗಾಗಲೇ ಆದೇಶ ಹೊರಡಿಸಿ ಮೀಸಲಾತಿ ಸೌಲಭ್ಯ ಕಲ್ಪಿಸಿವೆ. ಆದರೆ ರಾಜ್ಯದಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಜನರಲ್ಲಿ ಬೇಸರದ ಭಾವನೆ ಇದೆ. ಹಿರಿಯ ಸಚಿವರು ಮುಖ್ಯಮಂತ್ರಿಗಳ ಮಟ್ಟದಲ್ಲಿ ತೀರ್ಮಾನ ಮಾಡಬೇಕು. ಪ್ರಧಾನಿ ನರೇಂದ್ರ ಮೋದಿಯವರು ಕೇಂದ್ರದಲ್ಲಿ ಜಾರಿಗೊಳಿಸಿದ್ದರೂ ರಾಜ್ಯದಲ್ಲಿ ಇನ್ನೂ ಆಗಲಿಲ್ಲ ಎಂಬ ಭಾವನೆ ಜನರಲ್ಲಿ ದೂರಾಗಬೇಕಾದರೆ ಸರ್ಕಾರ ಸ್ಪಷ್ಟ ಆದೇಶ ಹೊರಡಿಸಬೇಕು. ಹಿರಿಯರಾದ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಇತರರು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಇತ್ಯರ್ಥಪಡಿಸಬೇಕು. ವಿಳಂಬವಾದಂತೆ ಅಧಿಕಾರಿಗಳು ಅನಗತ್ಯ ಗೊಂದಲ ಸೃಷ್ಟಿಸಿ ಸರ್ಕಾರದ ಉದ್ದೇಶ ಈಡೇರದಂತಾಗಬಾರದು ಎಂದು ಹೇಳಿದರು.

ಬಿಜೆಪಿಯ ಆರಗ ಜ್ಞಾನೇಂದ್ರ, ನಮ್ಮ ಭಾಗದ ಎರಡು ಮೂರು ಜಾತಿಗಳು ಪಟ್ಟಿಯಿಂದ ಬಿಟ್ಟು ಹೋಗಿವೆ. ಈ ಸಂಬಂಧ ನಿಯೋಗ ಈಗಾಗಲೇ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದು ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಶೀಘ್ರವೇ ಕ್ರಮ ವಹಿಸಬೇಕು ಎಂದು ಕೋರಿದರು. ಸಚಿವ ಶಿವರಾಮ ಹೆಬ್ಬಾರ್, ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಣಿ ವೈಶ್ಯ ಸಮುದಾಯವಿದ್ದು ಅಂಕೋಲಾದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಆ ಪಟ್ಟಿಯಲ್ಲಿ ಆ ಸಮುದಾಯ ಸೇರ್ಪಡೆಯಾಗಿಲ್ಲ, ಅದನ್ನೂ ಪಟ್ಟಿಯಲ್ಲಿ ಸೇರಿಸಬೇಕು ಎಂದು ಹೇಳಿದರು.

ಕೊನೆಗೆ ಮಾತನಾಡಿದ ಬಸವರಾಜ ಬೊಮ್ಮಾಯಿ, ಗುಜರಾತ್, ಗೋವಾ ಸೇರಿದಂತೆ ಬೇರೆ ರಾಜ್ಯಗಳಲ್ಲಿ ಸಿದ್ಧಪಡಿಸಿರುವ ಪಟ್ಟಿಯ ವಿವರ ಪಡೆದು ಪರಿಶೀಲಿಸಲಾಗುತ್ತಿದ್ದು ಅದರಂತೆ ಜಾತಿಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸಬೇಕಾಗುತ್ತದೆ. ಮೀಸಲಾತಿ ಬಿಟ್ಟು ಹೋಗಿರುವ ಸಮುದಾಯದ ಆರ್ಥಿಕ ಹಿಂದುಳಿದಿರುವಿಕೆ ಆಧಾರದ ಮೇಲೆ ನ್ಯಾಯ ನೀಡಬೇಕು ಎಂಬ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಶೇ. 10ರಷ್ಟು ಮೀಸಲಾತಿ ಕಲ್ಪಿಸಿದ್ದು ಅದರ ಲಾಭ ಕನ್ನಡಿಗರಿಗೂ ಸಿಗಬೇಕು. ಈ ಹಿಂದೆ ಹೊರಡಿಸಲಾಗಿದ್ದ ಆದೇಶದಲ್ಲಿ ಸ್ಪಷ್ಟತೆ ಇರಲಿಲ್ಲ. ಈಗಾಗಲೇ ಚರ್ಚಿಸಲಾಗಿದ್ದು ಸದನ ಮುಗಿಯುವುದರೊಳಗೆ ಇತ್ಯರ್ಥಪಡಿಸಿ ಸ್ಪಷ್ಟ ಆದೇಶ ಹೊರಡಿಸಲಾಗುವುದು ಎಂದು ತಿಳಿಸಿದರು.

ಈ ವಿಚಾರದಲ್ಲಿ ಉನ್ನತ ಮಟ್ಟದಲ್ಲಿ ತೀರ್ಮಾನ ಕೈಗೊಂಡು ಕಂದಾಯ ಸಚಿವರೊಂದಿಗೂ ಚರ್ಚಿಸಿ ಎಲ್ಲ ತಹಸೀಲ್ದಾರ್‌ಗಳಿಗೆ ಆದೇಶ ನೀಡಬೇಕಿದೆ. ಗೊಂದಲ ಉಂಟಾಗಬಾರದು ಎಂಬ ಕಾರಣಕ್ಕೆ ಎಲ್ಲ ರೀತಿಯ ಎಚ್ಚರಿಕೆ ವಹಿಸಿ ಸ್ಪಷ್ಟ ಆದೇಶ ಹೊರಡಿಸಲಾಗುವುದು ಎಂದು ಭರವಸೆ ನೀಡಿದರು.